ಸಮಯ ಸಿಕ್ಕಲ್ಲಿ ಒಂದೆ ಸಮನೆ ಹಲ್ಲು ಮಸೆಯತೊಡಗಿದೆವು. ಮನುಷ್ಯ ಆರೋಗ್ಯಕರವಾಗಿ ಇರಬೇಕಾದರೆ ಒಬ್ಬೊಬ್ಬರೆ ಮಲಗಬೇಕು ಎಂದು ಹೇಳಿ ಅವ್ವ ನನ್ನನ್ನು ಬೇರೆ ಕೋಣೆಯಲ್ಲಿ ಮಲಗಿಸಲು ಸುರು ಮಾಡಿ ವರ್ಷಗಳೆ ಉರುಳಿವೆ. ನನಗೆ ಅನ್ವಯವಾಗುವ ಕಾಯಿದೆ ಅಪ್ಪನಿಗೆ ಯಾಕೆ ಅನ್ವಯವಾಗುವುದಿಲ್ಲ? ಆತ ಅವ್ವನ ಕೋಣೆಯಲ್ಲಿ ಮಲಗುವುದು ಅವನ ಆರೋಗ್ಯಕ್ಕೆ ಒಳ್ಳೆಯದಲ್ಲ. ಅಲ್ಲವೆ? ಆ ವಿಷಯವನ್ನು ಅವ್ವ ಸುಲಭವಾಗಿ ತಿಳಿಸಿ ಹೇಳಬಹುದಲ್ಲ? ಆದರೂ ಯಾಕೆ ಸುಮ್ಮನಿದ್ದಾಳೆ? ಅವಳು ಹೇಳಿದರೂ ಆತ ಕಿವಿಗೆ ಹಾಕಿಕೊಳ್ಳುತ್ತಿಲ್ಲವೆ? ಮತ್ತೂ ಒಂದು ವಿಚಾರ ಹೊಳೆಯಿತು. ಅವರಿಬ್ಬರೂ ಜೊತೆಯಿರುವಾಗ ಏನಾದರೂ ಮಂತ್ರ–ತಂತ್ರದಂತಹ ಕಸರತ್ತು ನಡೆಯುತ್ತದೆಯೇ? ಅವರಿಗೆ ಗೊತ್ತಾಗದಂತೆ ನಾನು ಅವರ ಮೇಲೆ ನಿಗಾ ಇಟ್ಟೆ. ಅಂತಹ ಅಸಹಜ ನಡವಳಿಕೆಯೇನೂ ಅವರಲ್ಲಿ ನನಗೆ ಕಂಡುಬರಲಿಲ್ಲ. ಬರುಬರುತ್ತ ನನಗೆ ಅವ್ವಅಪ್ಪ ಕೂಡಿ ಇರುವ ಕಾರಣಕ್ಕೆ ಉತ್ತರ ಅಸ್ಪಷ್ಟವಾಗಿಯಾದರೂ ಸಿಕ್ಕಿತು. ನಾವು ದೊಡ್ಡವರಾಗದ ಹೊರತು, ಮದುವೆಯಾಗದ ಹೊರತು ಒಬ್ಬರಿಗೊಬ್ಬರು ಸಮೀಪ ಬರಲಿಕ್ಕೆ ಸಾಧ್ಯವಿಲ್ಲ ಎನ್ನುವ ವಿಚಾರ ಹೊಳೆದು ನಾನು ಏನೋ ಮಹತ್ತರವಾದುದನ್ನು ಕಂಡುಹಿಡಿದಿದ್ದೇನೆ ಎನ್ನುವ ಸಾರ್ಥಕ ಭಾವ ತುಂಬಿಕೊಂಡೆ. ಅದನ್ನು ಅವ್ವನ ಮುಂದೆ ಪ್ರಕಟಪಡಿಸುವ ಇರಾದೆಯನ್ನೂ ಹೊಂದಿದ್ದೆ.

ಒಂದು ದಿನ ನಾನು ನನ್ನಷ್ಟಕ್ಕೆ ಸುಮ್ಮನೆ ಆಟವಾಡಿಕೊಂಡಿದ್ದೆ. ಆತ ಮಮ್ಮಿಯೊಡನೆ ಮಾತಾಡುತ್ತಿದ್ದ. ನನ್ನ ಆಟವನ್ನು ಕೆಡಿಸಲೋ ಎಂಬಂತೆ ಇನ್ನಷ್ಟು ದೊಡ್ಡ ದನಿ ತೆಗೆದು ಮಾತಾಡತೊಡಗಿದ. ಆತ ಬೇಕೆಂತಲೆ ನನ್ನ ಮೂಡ್‌ನ್ನು ಹಾಳು ಮಾಡುತ್ತಿದ್ದಾಗ ನಾನ್ಯಾಕೆ ಸುಮ್ಮನಿರಬೇಕು? ಮುಯ್ಯಿಗೆ ಮುಯ್ಯಿ ತೀರಿಸಲೇಬೇಕು.

"ಮಮ್ಮಿ..." ಆತ್ಮೀಯವಾಗಿ ಮಾತಾಡಿಕೊಂಡಿದ್ದ ಆ ವಾತಾವರಣಕ್ಕೆ ಕಲ್ಲು ಒಗೆಯುವವನಂತೆ ನಾನು ಒದರಿದೆ.

"ಏನೋ?" ಮಮ್ಮಿ ಪ್ರೀತಿಯಿಂದಲೆ ಕೇಳಿದಳು.

"ನಾ ದೊಡ್ಡವನಾದ ಮ್ಯಾಲೆ ಏನ್ ಮಾಡ್ತೀನಿ, ಗೊತ್ತಾ?"

"ಏನ್ ಮಾಡ್ತೀಯೋ ನನ್ನ ಚಿನ್ನಾ?" ಮಕ್ಕಳು ಎಷ್ಟೆಲ್ಲ ಚೆಂದ ಮಾತಾಡುತ್ತಾರೆ ಎಂದು ಅವಳು ಅಪ್ಪನಿಗೆ ಕಣ್ಣಿನಲ್ಲಿಯೆ ಸೂಚಿಸಿದಳು.

"ನಾ ದೊಡ್ಡಾಂವ ಆದ ಮ್ಯಾಲ ಮಾಡೋ ಮೊಟ್ಟಮೊದಲ ಕೆಲಸ ಅಂದ್ರ ಮದುವಿಯಾಗೋದು..." ತುಂಬ ಗಂಭೀರವಾಗಿಯೇ ನಾನು ಹೇಳಿದೆ.

ಅವರಿಬ್ಬರೂ ಜೋರಾಗಿ ನಗತೊಡಗಿದರು. ಅವರು ಎಷ್ಟು ಜೋರಾಗಿ ನಗತೊಡಗಿದರೆಂದರೆ ನಕ್ಕು ನಕ್ಕು ಅವರ ಕಣ್ಣುಗಳಲ್ಲಿ ನೀರು ಬಂದವು.

"ಮದುವಿಯಾಗ್ತಿಯಲ್ಲ. ಒಳ್ಳೆದಾತು. ಮತ್ತ್ ಮಕ್ಕಳು?"

"ನಾವು ಬಾಳಷ್ಟು ಮಕ್ಕಳನ್ನು ಕೂಡ ಹಡಿತೀವಿ." ಅವರ ನಗು ಮುಗಿಲು ಮುಟ್ಟಿತು.

ಅವ್ವ ನಗುತ್ತಲೆ ಅಂದಳು: "ಆತಪಾ ಲ್ಯಾರಿ, ನಿನ್ನ ಮಾತು ಕೇಳಿ ಖುಷಿಯಾತು. ನೀ ಹೆಂಗ ನಮಗ ಒಂದು ಸುದ್ದಿ ಕೊಟ್ಟೆಯೋ ಹಂಗ ನಾವು ನಿನಗೊಂದು ಸುದ್ದಿ ಕೊಡ್ತೀವಿ ಈಗ. ಸದ್ಯದಾಗ ಈ ಮನಿಯೊಳಗ ಒಂದು ಪುಟಾಣಿ ಮಗು ಬರತೇತಿ. ನಿನಗೂ ಆಡಲಿಕ್ಕೆ ಜೊಲೋ ಆಗತೇತಿ. ಆವಾಗ ಅಂತಿದ್ದೆಲ್ಲ, 'ಮಮ್ಮಿ, ನಮ್ಮ ಮನಿಯೊಳಗ ಒಂದು ಮುದ್ದು ಮರಿ ಬೇಕಂತ.' ಅದಕ್ಕ ನಮ್ಮ ಪುಟ್ಟು ಹೇಳ್ಯಾನ ಅಂತೇಳಿ ಮಗುವನ್ನು ಸ್ವಾಗತಿಸಲಿಕ್ಕ ಸಿದ್ಧ ಆಗೇವಿ ನಾವು." ಮೊದಲೆಲ್ಲ ಮನೆಯಲ್ಲಿಯೆ ಇರುತ್ತಿದ್ದ ಅಪ್ಪ ಇತ್ತೀಚೆಗೆ ಹೊರಗೆ ಹೋಗುತ್ತಿದ್ದಾನೆ. ಏಳೆಂಟು ತಾಸು ಮನೆಯಲ್ಲಿ ಇರುವುದಿಲ್ಲ. ಅವನು ಮನೆಯಲ್ಲಿ ಇಲ್ಲದ್ದು ಒಳ್ಳೆಯದಾಯಿತು, ಅವ್ವನ ಜೊತೆ ಕಾಲ ಕಳೆಯಬಹುದೆಂದು ನಾನು